ಕರ್ನಾಟಕ ಸರ್ಕಾರ
ಸಾರಿಗೆ ಇಲಾಖೆ

**ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರ ಕಛೇರಿ,**
1ನೇ ಮಹಡಿ, ಟಿಟಿಎಂಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027

# “ ಸಾರ್ವಜನಿಕ ಪ್ರಕಟಣೆ ”

**ವಿಷಯ:** ಸಾರ್ವಜನಿಕರು ತಮ್ಮ ವಾಹನಗಳ ಇಂಧನ ಬದಲಾವಣೆಯನ್ನು ನೋಂದಣಿ ಪ್ರಮಾಣಪತ್ರದಲ್ಲಿ ನಮೂದಿಸಿಕೊಳ್ಳುವ ಬಗ್ಗೆ.

***

ಸಾರ್ವಜನಿಕರು ಪ್ರಸ್ತುತ ನೋಂದಣಿ ಮಾಡಿಕೊಂಡಿರುವ ತಮ್ಮ ವಾಹನಗಳಿಗೆ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 52(1), (1ಎ) ರಂತೆ ಇಂಜಿನ್ / ಇಂಧನ ಬದಲಾವಣೆಯನ್ನು ಮಾಡಿಕೊಳ್ಳಲು ಇಚ್ಛಿಸಿದಲ್ಲಿ, ಈ ಕೆಳಕಂಡ ವಿಧಾನವನ್ನು ಅನುಸರಿಸಲು ತಿಳಿಸಿದೆ.

- ವಾಹನ ಮಾಲೀಕರುಗಳು ತಮ್ಮ ವಾಹನಗಳಿಗೆ ಇಂಧನ ಪರಿವರ್ತನೆ ಮಾಡಿಕೊಳ್ಳಲು ಇಚ್ಛಿಸಿದಲ್ಲಿ, ಸಂಬಂಧಿಸಿದ ನೋಂದಣಿ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದುಕೊಂಡು ಸರ್ಕಾರದಿಂದ ಅನುಮೋದಿತವಾದ ಇಂಧನ ಪರಿವರ್ತನ (ರೆಟ್ರೋಫಿಟ್ಮೆಂಟ್ ಸೆಂಟರ್) ಕೇಂದ್ರಗಳಲ್ಲಿ ಇಂಧನ ಪರಿವರ್ತನೆ ಕಿಟ್‌ಗಳನ್ನು ವಾಹನಗಳಿಗೆ ಅಳವಡಿಸಿಕೊಂಡು ನೋಂದಣಿ ಪ್ರಾಧಿಕಾರದಲ್ಲಿ ವಾಹನಗಳನ್ನು ತಪಾಸಣೆಗೆ ಒಳಪಡಿಸಿ, ನೋಂದಣಿ ಪತ್ರದಲ್ಲಿ ಇಂಧನ ಪರಿವರ್ತನೆ ವಿವರವನ್ನು ನಮೂದಿಸಿಕೊಳ್ಳುವುದು; **ಅಥವಾ**

- ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 52(3) ರಂತೆ ವಾಹನ ಮಾಲೀಕರು ನೋಂದಣಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ತಮ್ಮ ವಾಹನಗಳಿಗೆ ಇಂಧನ ಪರಿವರ್ತನೆಯನ್ನು ಮಾಡಿಕೊಂಡಲ್ಲಿ, ಪರಿವರ್ತನೆ ಪೂರ್ಣಗೊಂಡ 14 ದಿನಗಳಲ್ಲಿ ಎಲ್ಲಾ ಮಾಹಿತಿಗಳೊಂದಿಗೆ ವಾಹನದ ನೋಂದಣಿ ಪತ್ರವನ್ನು ಸಂಬಂಧಿಸಿದ ನೋಂದಣಿ ಪ್ರಾಧಿಕಾರಕ್ಕೆ ಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಿ ಇಂಧನ ಪರಿವರ್ತನೆಯನ್ನು ತಮ್ಮ ನೋಂದಣಿ ಪತ್ರದಲ್ಲಿ ನಮೂದಿಸಿ ಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಾರಿಗೆ ಇಲಾಖೆಯ ವೆಬ್ ಸೈಟ್ https://transport.karnataka.gov.in ಇಲ್ಲಿಗೆ ಭೇಟಿ ನೀಡಬಹುದಾಗಿದೆ.

08/04

**ಆಯುಕ್ತರು**
**ಸಾರಿಗೆ ಮತ್ತು ರಸ್ತೆ ಸುರಕ್ಷತೆ,**
**ಬೆಂಗಳೂರು**